**CFC.R.P. 67** ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.**

Form No.4(Civil)
Deposition

**ಎಸ್.ಸಿ. ನಂಃ 25/2017**

**ಪಿ.ಡಬ್ಲ್ಯೂ ನಂಃ 17**
**ಸಿಡಬ್ಲ್ಯೂ ನಂಃ 24**
**ಸಾಕ್ಷಿಯನ್ನು ದಿನಾಂಕಃ 01-07-2026**
**ರಂದು** ಪ್ರತಿಜ್ಞೆ ಬೋಧಿ**ಸಲಾಯಿತು.**

| | | |
|---|---|---|
| ಸಾಕ್ಷಿದಾರಳ ಹೆಸರು | ಃ | ಸವಿತಾ |
| ಗಂಡನ ಹೆಸರು | ಃ | ಗವಿಸಿದ್ದಪ್ಪ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಆಶಾ ಮೇಲ್ವಿಚಾರಕಿ |
| ವಾಸಸ್ಥಳ | ಃ | ಚಿಕ್ಕಮ್ಯಾಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಾ.

ಮೃತ ಮಂಜುಳಾಳ ಪರಿಚಯವಿತ್ತು. ಆಕೆ ಆಶಾಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದಳು. 2016 ರಲ್ಲಿ ಕುಷ್ಟಗಿ ತಾಲ್ಲೂಕು ಪಂಚಾಯತಿಯಲ್ಲಿ ಉಪಗ್ರಹ ಆಧಾರಿತ ತರಬೇತಿ ಇದ್ದು, ಸದರಿ ತರಬೇತಿಗೆ ಮೃತ ಮಂಜುಳಾ ಸೇರಿದಂತೆ ಒಟ್ಟು 53 ಆಶಾಕಾರ್ಯಕರ್ತೆಯರು ಪಾಲ್ಗೊಂಡಿದ್ದರು. ಸದರಿ ಕಾರ್ಯಕ್ರಮ 10 ರಿಂದ ಸಂಜೆ 5 - 5-30 ರವರೆಗೆ ಇತ್ತು. ಆ ನಂತರ ಆಕೆಗೆ ಏನಾಯಿತು ಎಲ್ಲಿ ಹೇಗೆ ತೀರಿಕೊಂಡಳು ಎಂದು ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

2). ದಿಃ 16-3-2016 ರಂದು ಕುಷ್ಟಗಿ ತಾಲ್ಲೂಕು ಪಂಚಾಯತಿಯಲ್ಲಿ ಉಪಗ್ರಹ ಆಧಾರಿತ ತರಬೇತಿ ಇತ್ತು ಎಂದರೆ ಸರಿ. ಅದೇ ದಿನ ಕುಷ್ಟಗಿ ಯಲ್ಲಿರುವ ತನ್ನ ರೂಮಿಗೆ ಮಂಜುಳಾಳನ್ನು 1 ನೇ ಆರೋಪಿ ಕರೆಸಿಕೊಂಡು ಸ್ಪ್ರೈಟ್ ಗೆ ನಿದ್ದೆ ಗುಳಿಗೆ ಹಾಕಿ ಆಕೆ ಮಲಗಿದ್ದಾಗ ಟಾವೆಲ್ಲನಿಂದ ಕುತ್ತಿಗೆಗೆ ಬಿಗಿದುಕೊಲೆ ಮಾಡಿ 2 ನೇ ಆರೋಪಿಯನ್ನು ಕರೆಸಿಕೊಂಡು ಆತನ ಬೈಕ ಮೇಲೆ ಕುರುಬನಾಳ ಸೀಮಾ ಬಳಿ ಕೊಂಡು ಹೋಗಿ ಸುಟ್ಟು ಹಾಕಿದ ವಿಚಾರ ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಇದೇ ರೀತಿ "ನಂತರ ನನಗೆ . . . . ಹೇಳಿ ಬರೆಸಿರುತ್ತೇನೆ'' ಎಂದು ನಿಪಿ 12 ರೀತ್ಯ

ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : 1 ನೇ ಆರೋಪಿಯ ಪರ ವಕೀಲರಿಂದ

3). ಕುಷ್ಟಗಿ ತಾಲ್ಲೂಕು ಪಂಚಾಯತಿಯಲ್ಲಿ ಉಪಗ್ರಹ ಆಧಾರಿತ ತರಬೇತಿ ಇದ್ದ ಬಗ್ಗೆ ದಾಖಲೆಯನ್ನು ಪೊಲೀಸರು ಆ ಸಮಯ ಪಡೆದುಕೊಂಡಿರಬಹುದು ನೆನಪಿಲ್ಲ. ಆ ಹಾಜರಾತಿ ಪುಸ್ತಕದಲ್ಲಿ ಎಲ್ಲಾ ತರಬೇತಿದಾರರು ಸಹಿಗಳನ್ನು ಮಾಡಿದ್ದರು. ಆ ಪುಸ್ತಕವನ್ನು ಸಹಾ ಪೊಲೀಸರು ಪಡೆದುಕೊಂಡಿರಬಹುದು.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P. 67** ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.**

Form No.4(Civil)
Deposition

**ಎಸ್.ಸಿ. ನಂಃ 25/2017**

**ಪಿ.ಡಬ್ಲ್ಯೂ ನಂಃ 16**

**ಸಿಡಬ್ಲ್ಯೂ ನಂಃ 23**

**ಸಾಕ್ಷಿಯನ್ನು ದಿನಾಂಕಃ 01-07-2026**

**ರಂದು** ಪ್ರತಿಜ್ಞೆ ಬೋಧಿ**ಸಲಾಯಿತು.**

| | | |
|---|---|---|
| ಸಾಕ್ಷಿದಾರಳ ಹೆಸರು | ಃ | ಗಂಗಮ್ಮ |
| ಗಂಡನ ಹೆಸರು | ಃ | ಗಣೇಶಪ್ಪ |
| ವಯಸ್ಸು | ಃ | 59 ವರ್ಷ |
| ಉದ್ಯೋಗ | ಃ | ಅಂಗನವಾಡಿ ಶಿಕ್ಷಕಿ |
| ವಾಸಸ್ಥಳ | ಃ | ವಣಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಾ.

ಮೃತ ಮಂಜುಳಾಳ ಪರಿಚಯವಿತ್ತು. 1 ನೇ ಆರೋಪಿ ಗೊತ್ತು ಅವರು ನಮ್ಮ ಊರಿನವರು. 1 ನೇ ಆರೋಪಿ ಆಶಾಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ ವಿಚಾರ ನನಗೆ ಮಾಹಿತಿ ಇಲ್ಲ. ನಾನು ಯಾವುದೇ ಅರ್ಜಿ ಶಿಫಾರಸ್ಸು ಮಾಡಿರಲಿಲ್ಲ. ಆ ಅರ್ಜಿಯನ್ನು 1 ನೇ ಆರೋಪಿ ಮಂಜುಳಾಳ ಕೈಗೆ ಕೊಟ್ಟ ಬಗ್ಗೆ ಗೊತ್ತಿಲ್ಲ. ಮಂಜುಳಾಳ ಕೊಲೆ ಆಗಿತ್ತು ಎಂದು ತಿಳಿದುಬಂತು. ಆದರೆ ಆಕೆಯನ್ನು ಯಾರು ಹೇಗೆ ಎಲ್ಲಿ ಮತ್ತು ಯಾವ ಕಾರಣಕ್ಕಾಗಿ ಕೊಲೆ ಮಾಡಿದ್ದಾರೆಂದು ಗೊತ್ತಿಲ್ಲ. ಮಂಜುಳಾ ಮತ್ತು 1 ನೇ ಆರೋಪಿಯ ಮಧ್ಯ ಸಂಬಂಧ ಯಾವ ರೀತಿ ಇತ್ತು ಎಂದು ಗೊತ್ತಿಲ್ಲ. ಅವರ ಮಧ್ಯ ಆದ ಜಗಳದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಮೇಲೆ ನಂತರ ಏನು ಆರೋಪ ಬಂತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

**2). 2016** ರಲ್ಲಿ **1** ನೇ ಆರೋಪಿ ಆಶಾಕಾರ್ಯಕರ್ತೆ ಹುದ್ದೆಗಾಗಿ ಕೊಟ್ಟ ಅರ್ಜಿಯನ್ನು ಪಂಚಾಯತಿಯಲ್ಲಿ ನಾವು ಮನ್ನಿಸಿ ಶಿಫಾರಸ್ಸು ಮಾಡಿದ್ದೆ ಎಂದರೆ ಸರಿಯಲ್ಲ. ಆ ಅರ್ಜಿಯನ್ನು ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ತಲುಪಿಸದೇ ಆಕೆಯ ಬಳಿ ಇಟ್ಟುಕೊಂಡಿದ್ದಳು ಎಂದರೆ ಗೊತ್ತಿಲ್ಲ. ಈ ವಿಚಾರದಲ್ಲಿ ಅವರಿಬ್ಬರ

ಮಧ್ಯ ವೈಮನಸ್ಸು ಇತ್ತು ಹಾಗೂ ಅವರಿಬ್ಬರೂ ಜಗಳ ಮಾಡಿಕೊಂಡಿದ್ದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಇದೇ ವಿಚಾರದಿಂದ ದಿಃ **16-3-2016** ರಂದು ಸಂಜೆ **7** ಗಂಟೆ ಸುಮಾರಿಗೆ ಕುಷ್ಟಗಿ ಯಲ್ಲಿರುವ ತನ್ನ ರೂಮಿಗೆ ಮಂಜುಳಾಳನ್ನು **1** ನೇ ಆರೋಪಿ ಕರೆಸಿಕೊಂಡು ಸ್ಪ್ರೈಟ್ ಗೆ ನಿದ್ದೆ ಗುಳಿಗೆ ಹಾಕಿ ಆಕೆ ಮಲಗಿದ್ದಾಗ ಟಾವೆಲ್ಲಿನಿಂದ ಕುತ್ತಿಗೆಗೆ ಬಿಗಿದುಕೊಲೆ ಮಾಡಿ **2** ನೇ ಆರೋಪಿಯನ್ನು ಕರೆಸಿಕೊಂಡು ಆತನ ಬೈಕ ಮೇಲೆ ಕುರುಬನಾಳ ಸೀಮಾ ಬಳಿ ಕೊಂಡು ಹೋಗಿ ಸುಟ್ಟು ಹಾಕಿದ ವಿಚಾರ ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಇದೇ ರೀತಿ **"**ನಾನು ಈ ಮೇಲೆ ಕಾಣಿಸಿದ . . . . ಸುಟ್ಟಿದ್ದು ಇರುತ್ತದೆ**''** ಎಂದು ನಿಪಿ **11** ರೀತ್ಯ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. **1** ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು **: 1** ನೇ ಆರೋಪಿಯ ಪರ ವಕೀಲರಿಂದ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P. 67** ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.**

| Form No.4(Civil)<br>Deposition |
|---|

**ಎಸ್.ಸಿ. ನಂಃ 25/2017**

**ಪಿ.ಡಬ್ಲ್ಯೂ ನಂಃ 15**

**ಸಿಡಬ್ಲ್ಯೂ ನಂಃ 22**

**ಸಾಕ್ಷಿಯನ್ನು ದಿನಾಂಕಃ 01-07-2026**

**ರಂದು** ಪ್ರತಿಜ್ಞೆ ಬೋಧಿ**ಸಲಾಯಿತು.**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಮಲ್ಲಯ್ಯಾ |
| ತಂದೆಯ ಹೆಸರು | ಃ | ವೀರಭದ್ರಯ್ಯಾ |
| ವಯಸ್ಸು | ಃ | 43 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ವಣಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಾ.

2016 ರಲ್ಲಿ ನಾನು ತಳುವಗೇರಾ ಗ್ರಾಮ ಪಂಚಾಯತಿಯ ಸದಸ್ಯನಾಗಿದ್ದೆ. ಮೃತ ಮಂಜುಳಾಳ ಪರಿಚಯವಿತ್ತು. 1 ನೇ ಆರೋಪಿ ಗೊತ್ತು ಅವರು ನಮ್ಮ ಊರಿನವರು. 1 ನೇ ಆರೋಪಿ ಆಶಾಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ ವಿಚಾರ ನನಗೆ ಮಾಹಿತಿ ಇಲ್ಲ. ಆ ಅರ್ಜಿಯ ಶಿಫಾರಸ್ಸು ಮಾಡುವ ಅಧಿಕಾರ ನನಗೆ ಇರಲಿಲ್ಲ ಹಾಗೂ ನಾನು ಯಾವುದೇ ಅರ್ಜಿ ಶಿಫಾರಸ್ಸು ಮಾಡಿರಲಿಲ್ಲ. ಆ ಅರ್ಜಿಯನ್ನು 1 ನೇ ಆರೋಪಿ ಮಂಜುಳಾಳ ಕೈಗೆ ಕೊಟ್ಟ ಬಗ್ಗೆ ಗೊತ್ತಿಲ್ಲ. ಮಂಜುಳಾಳ ಕೊಲೆ ಆಗಿತ್ತು ಎಂದು ತಿಳಿದುಬಂತು. ಆದರೆ ಆಕೆಯನ್ನು ಯಾರು ಹೇಗೆ ಎಲ್ಲಿ ಮತ್ತು ಯಾವ ಕಾರಣಕ್ಕಾಗಿ ಕೊಲೆ ಮಾಡಿದ್ದಾರೆಂದು ಗೊತ್ತಿಲ್ಲ. ಮಂಜುಳಾ ಮತ್ತು 1 ನೇ ಆರೋಪಿಯ ಮಧ್ಯ ಸಂಬಂಧ ಯಾವ ರೀತಿ ಇತ್ತು ಎಂದು ಗೊತ್ತಿಲ್ಲ. ಅವರ ಮಧ್ಯ ಆದ ಜಗಳದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಮೇಲೆ ನಂತರ ಏನು ಆರೋಪ ಬಂತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

2). 2016 ರಲ್ಲಿ 1 ನೇ ಆರೋಪಿ ಆಶಾಕಾರ್ಯಕರ್ತೆ ಹುದ್ದೆಗಾಗಿ ಕೊಟ್ಟ ಅರ್ಜಿಯನ್ನು ಪಂಚಾಯತಿಯಲ್ಲಿ ನಾವು ಮನ್ನಿಸಿ ಶಿಫಾರಸ್ಸು ಮಾಡಿ ಆ ಅರ್ಜಿಗೆ ಸಹಿ

ಮಾಡಿದ್ದೆ ಎಂದರೆ ಸರಿಯಲ್ಲ. ಆ ಅರ್ಜಿಯನ್ನು ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ತಲುಪಿಸದೇ ಆಕೆಯ ಬಳಿ ಇಟ್ಟುಕೊಂಡಿದ್ದಳು ಎಂದರೆ ಗೊತ್ತಿಲ್ಲ. ಈ ವಿಚಾರದಲ್ಲಿ ಅವರಿಬ್ಬರ ಮಧ್ಯ ವೈಮನಸ್ಸು ಇತ್ತು ಹಾಗೂ ಅವರಿಬ್ಬರೂ ಜಗಳ ಮಾಡಿಕೊಂಡಿದ್ದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಇದೇ ವಿಚಾರದಿಂದ ದಿಃ **16-3-2016** ರಂದು ಸಂಜೆ **7** ಗಂಟೆ ಸುಮಾರಿಗೆ ಕುಷ್ಟಗಿ ಯಲ್ಲಿರುವ ತನ್ನ ರೂಮಿಗೆ ಮಂಜುಳಾಳನ್ನು **1** ನೇ ಆರೋಪಿ ಕರೆಸಿಕೊಂಡು ಸ್ಪ್ರೈಟ್ ಗೆ ನಿದ್ದೆ ಗುಳಿಗೆ ಹಾಕಿ ಆಕೆ ಮಲಗಿದ್ದಾಗ ಟಾವೆಲ್ಲನಿಂದ ಕುತ್ತಿಗೆಗೆ ಬಿಗಿದುಕೊಲೆ ಮಾಡಿ **2** ನೇ ಆರೋಪಿಯನ್ನು ಕರೆಸಿಕೊಂಡು ಆತನ ಬೈಕ ಮೇಲೆ ಕುರುಬನಾಳ ಸೀಮಾ ಬಳಿ ಕೊಂಡು ಹೋಗಿ ಸುಟ್ಟು ಹಾಕಿದ ವಿಚಾರ ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಇದೇ ರೀತಿ **"**ನಾನು ಈ ಮೇಲೆ ಕಾಣಿಸಿದ . . . . ಸುಟ್ಟಿದ್ದು ಇರುತ್ತದೆ**''** ಎಂದು ನಿಪಿ **10** ರೀತ್ಯ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. **1** ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು **: 1** ನೇ ಆರೋಪಿಯ ಪರ ವಕೀಲರಿಂದ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P. 67** ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.**

Form No.4(Civil)
Deposition

**ಎಸ್.ಸಿ. ನಂಃ 25/2017**

**ಪಿ.ಡಬ್ಲ್ಯೂ ನಂಃ 14**

**ಸಿಡಬ್ಲ್ಯೂ ನಂಃ 21**

**ಸಾಕ್ಷಿಯನ್ನು ದಿನಾಂಕಃ 01-07-2026**

**ರಂದು** ಪ್ರತಿಜ್ಞೆ ಬೋಧಿ**ಸಲಾಯಿತು.**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಹನುಮಂತಪ್ಪ |
| ತಂದೆಯ ಹೆಸರು | ಃ | ಮರಗಪ್ಪ |
| ವಯಸ್ಸು | ಃ | **40** ವರ್ಷ |
| ಉದ್ಯೋಗ | ಃ | ಕೂಲಿಕೆಲಸ |
| ವಾಸಸ್ಥಳ | ಃ | ವಣಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಾ.

**2016** ರಲ್ಲಿ ನಾನು ತಳುವಗೇರಾ ಗ್ರಾಮ ಪಂಚಾಯತಿಯ ಸದಸ್ಯನಾಗಿದ್ದೆ. ಮೃತ ಮಂಜುಳಾಳ ಪರಿಚಯವಿತ್ತು. **1** ನೇ ಆರೋಪಿ ಗೊತ್ತು ಅವರು ನಮ್ಮ ಊರಿನವರು. **1** ನೇ ಆರೋಪಿ ಆಶಾಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ ವಿಚಾರ ನನಗೆ ಮಾಹಿತಿ ಇಲ್ಲ. ಆ ಅರ್ಜಿಯ ಶಿಫಾರಸ್ಸು ಮಾಡುವ ಅಧಿಕಾರ ನನಗೆ ಇರಲಿಲ್ಲ ಹಾಗೂ ನಾನು ಯಾವುದೇ ಅರ್ಜಿ ಶಿಫಾರಸ್ಸು ಮಾಡಿರಲಿಲ್ಲ. ಆ ಅರ್ಜಿಯನ್ನು **1** ನೇ ಆರೋಪಿ ಮಂಜುಳಾಳ ಕೈಗೆ ಕೊಟ್ಟ ಬಗ್ಗೆ ಗೊತ್ತಿಲ್ಲ. ಮಂಜುಳಾಳ ಕೊಲೆ ಆಗಿತ್ತು ಎಂದು ತಿಳಿದುಬಂತು. ಆದರೆ ಆಕೆಯನ್ನು ಯಾರು ಹೇಗೆ ಎಲ್ಲಿ ಮತ್ತು ಯಾವ ಕಾರಣಕ್ಕಾಗಿ ಕೊಲೆ ಮಾಡಿದ್ದಾರೆಂದು ಗೊತ್ತಿಲ್ಲ. ಮಂಜುಳಾ ಮತ್ತು **1** ನೇ ಆರೋಪಿಯ ಮಧ್ಯ ಸಂಬಂಧ ಯಾವ ರೀತಿ ಇತ್ತು ಎಂದು ಗೊತ್ತಿಲ್ಲ. ಅವರ ಮಧ್ಯ ಆದ ಜಗಳದ ಬಗ್ಗೆ ನನಗೆ ಗೊತ್ತಿಲ್ಲ. **1** ನೇ ಆರೋಪಿ ಮೇಲೆ ನಂತರ ಏನು ಆರೋಪ ಬಂತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

**2). 2016** ರಲ್ಲಿ **1** ನೇ ಆರೋಪಿ ಆಶಾಕಾರ್ಯಕರ್ತೆ ಹುದ್ದೆಗಾಗಿ ಕೊಟ್ಟ ಅರ್ಜಿಯನ್ನು ಪಂಚಾಯತಿಯಲ್ಲಿ ನಾವು ಮನ್ನಿಸಿ ಶಿಫಾರಸ್ಸು ಮಾಡಿ ಆ ಅರ್ಜಿಗೆ ಸಹಿ

ಮಾಡಿದ್ದೆ ಎಂದರೆ ಸರಿಯಲ್ಲ. ಆ ಅರ್ಜಿಯನ್ನು ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ತಲುಪಿಸದೇ ಆಕೆಯ ಬಳಿ ಇಟ್ಟುಕೊಂಡಿದ್ದಳು ಎಂದರೆ ಗೊತ್ತಿಲ್ಲ. ಈ ವಿಚಾರದಲ್ಲಿ ಅವರಿಬ್ಬರ ಮಧ್ಯ ವೈಮನಸ್ಸು ಇತ್ತು ಹಾಗೂ ಅವರಿಬ್ಬರೂ ಜಗಳ ಮಾಡಿಕೊಂಡಿದ್ದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಇದೇ ವಿಚಾರದಿಂದ ದಿಃ **16-3-2016** ರಂದು ಸಂಜೆ **7** ಗಂಟೆ ಸುಮಾರಿಗೆ ಕುಷ್ಟಗಿ ಯಲ್ಲಿರುವ ತನ್ನ ರೂಮಿಗೆ ಮಂಜುಳಾಳನ್ನು **1** ನೇ ಆರೋಪಿ ಕರೆಸಿಕೊಂಡು ಸ್ಪ್ರೈಟ್ ಗೆ ನಿದ್ದೆ ಗುಳಿಗೆ ಹಾಕಿ ಆಕೆ ಮಲಗಿದ್ದಾಗ ಟಾವೆಲ್ಲನಿಂದ ಕುತ್ತಿಗೆಗೆ ಬಿಗಿದುಕೊಲೆ ಮಾಡಿ **2** ನೇ ಆರೋಪಿಯನ್ನು ಕರೆಸಿಕೊಂಡು ಆತನ ಬೈಕ ಮೇಲೆ ಕುರುಬನಾಳ ಸೀಮಾ ಬಳಿ ಕೊಂಡು ಹೋಗಿ ಸುಟ್ಟು ಹಾಕಿದ ವಿಚಾರ ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಇದೇ ರೀತಿ "ನಾನು ಈ ಮೇಲೆ ಕಾಣಿಸಿದ . . . . ಸುಟ್ಟಿದ್ದು ಇರುತ್ತದೆ'' ಎಂದು ನಿಪಿ **9** ರೀತ್ಯ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. **1** ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು **:** **1** ನೇ ಆರೋಪಿಯ ಪರ ವಕೀಲರಿಂದ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ